# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 57/2022

ಸಿಡಬ್ಲ್ಯೂ: 24
ಪಿಡಬ್ಲ್ಯೂ: 06

**<u>ದಿನಾಂಕ: 18-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

ಸಾಕ್ಷಿದಾರರ ಹೆಸರು : ದೊಡ್ಡಬಸಜ್ಜ

ತಂದೆಯ ಹೆಸರು : ಮೂಗಜ್ಜ

ವಯಸ್ಸು : 30 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಕಡಕೋಳ, ಬೆಣ್ಣೆಹಳ್ಳಿ ಅಂಚೆ.

**<u>ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:</u>**

ಅಸಾ–**1** ಕರಿಯಪ್ಪ ನನ್ನ ಚಿಕ್ಕಪ್ಪ. ಸಮ ಅವರ ಮಗಳು. ಅವಳನ್ನು ಆಕೆಯ ಗಂಡ ನಾರಪ್ಪ ಕೊಲೆ ಮಾಡಿ ಸಾಯಿಸಿದ್ದಾನೆ. ಸದರಿ ನಾರಪ್ಪನನ್ನು ವಿಸಿ ಮೂಲಕ ನೋಡಿ ಗುರುತಿಸುತ್ತಿದ್ದೇನೆ.

**2.** ದಿನಾಂಕ: **25–12–2015** ರಂದು ಸುಮ ಮತ್ತು ಆರೋಪಿಯ ಮದುವೆ ಸಿರಿಗೆರೆಯ ಮಠದಲ್ಲಿ ಸಾಮೂಹಿಕ ವಿವಾಹದಲ್ಲಿ ಆಗಿತ್ತು. ಮದುವೆಯಾದ ನಂತರ ಸುಮ ಗಂಡನ ಮನೆಯಾದ ಕೋಣನೂರಿನಲ್ಲಿ ವಾಸವಿದ್ದಳು. ಮದುವೆಯಾದ ನಂತರ **2–3** ವರ್ಷ ಗಂಡ ಹೆಂಡತಿ ಚೆನ್ನಾಗಿದ್ದರು. ಅವರಿಗೆ ಒಂದು ಗಂಡು ಮಗು ಇದೆ. ಆ ಮನೆಯಲ್ಲಿ ಮೊದಲ ಗಂಡ ಹೆಂಡತಿ ಮಾತ್ರ ಇರುತ್ತಿದ್ದು, ನಂತರ ಮಗು ಅವರ ಜೊತೆ ಇರುತ್ತಿತ್ತು. ಆರೋಪಿ ಏನೂ ಕೆಲಸಕ್ಕೆ ಹೋಗುತ್ತಿಲ್ಲ ಎಂದು ಸುಮ ನನಗೆ ಹೇಳುತ್ತಿದ್ದಳು. ಮನೆಗೆ ಏನೂ ತಂದು ಹಾಕುತ್ತಿದ್ದಲ್ಲ ಎಂದು ಹೇಳುತ್ತಿದ್ದಳು. ಇತ್ತೀಚೆಗೆ ಪ್ರಾವಿಜನ್ ಸ್ಟೋರಿಗೆ ಹೋಗುತ್ತಿದ್ದಾನೆಂದು ನನಗೆ ಗೊತ್ತಾಗಿತ್ತು. ಅಲ್ಲಿ ದುಡಿದಿದ್ದ ಹಣವನ್ನು ಕುಡಿತಕ್ಕೆ ಆಟಕ್ಕೆ ವ್ಯಯ ಮಾಡುತ್ತಿದ್ದಾನೆ ಎಂದು ಸುಮ ಹೇಳುತ್ತಿದ್ದಳು. ಆರೋಪಿ ಸುಮಾಳಿಗೆ ನಿನ್ನ ತಂದೆ ಮದುವೆಯಲ್ಲಿ ಏನೂ ವರದಕ್ಷಿಣೆ ಕೊಟ್ಟಿಲ್ಲ ಈಗ

ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹೊಡೆಯುವುದು ಬಡಿಯುದು ಮಾಡುತ್ತಿದ್ದಾನೆಂದು ಹೇಳುತ್ತಿದ್ದಳು. ಆಕೆ ಅಳುತ್ತಿದ್ದಳು.

**3.** ದಿನಾಂಕಃ **29–12–2021** ರಂದು ಆರೋಪಿ ಮಗುವನ್ನು ಅಸಾ–**3** ಇವಳ ಮನೆಯಲ್ಲಿ ಬಿಟ್ಟು ಸ್ವಲ್ಪ ಕೆಲಸ ಇದೆ ಎಂದು ಹೇಳಿ ಹೊರಟು ಹೋಗಿದ್ದ. ಮರು ದಿನ ಮದ್ಯಾಹ್ನ ಬಂದು ಮಗುವನ್ನು ಕರೆದುಕೊಂಡು ಹೋಗಿದ್ದ. ನನ್ನ ಚಿಕ್ಕಪ್ಪ ಕರಿಯಪ್ಪ ಆರೋಪಿಗೆ ಸುಮಾಳ ಬಗ್ಗೆ ಕೇಳಿದಾಗ ಆರೋಪಿ ಆಕೆ ಕಾಣೆಯಾಗಿದ್ದಾಳೆಂದು ಹೇಳಿದ್ದ. ಅಸಾ–**1** ಮತ್ತು ಆರೋಪಿ ಸುಮಾಳಿಗಾಗಿ ಹುಡುಕಾಡಿದ್ದರು. ಆದರೆ ಆಕೆ ಸಿಗಲಿಲ್ಲ. ಆಗ ಅಸಾ–**1** ಮತ್ತು ಆರೋಪಿ ಭರಮಸಾಗರ ಪೊಲೀಸ್ ಠಾಣೆಗೆ ಹೋಗಿದ್ದು ಅಲ್ಲಿ ಆರೋಪಿಯಿಂದ ಅಸಾ–**1** ಸುಮ ಕಾಣೆಯಾಗಿದ್ದಾಳೆಂದು ದೂರು ಕೊಡಿಸಿದ್ದ.

**4.** ದಿನಾಂಕಃ **06–01–2022** ರಂದು ಅಸಾ–**1** ಕೋಣನೂರಿಗೆ ಹೋಗಿದ್ದು, ಆಗ ಅವರಿಗೆ ಸುಮಾಳನ್ನು ಕೊಲೆ ಮಾಡಿ ಮನೆಯಲ್ಲಿ ಹೂತುಹಾಕಿದ್ದಾರೆಂದು ವಿಷಯ ಗೊತ್ತಾಗಿ ಸಂಜೆ ಪೋನ್ ಮಾಡಿ ನನಗೆ ವಿಷಯ ತಿಳಿಸಿದ್ದರು. ದಿನಾಂಕಃ **7** ರಂದು ನಾನು ಅಸಾ–**3, 5** ಮತ್ತು ಬಂದುಗಳು ಸೇರಿ ಕೋಣನೂರಿಗೆ ಹೋದೆವು. ಅಲ್ಲಿ ಪೊಲೀಸರು ಹಾಜರಿದ್ದರು. ಎಸಿಯವರು ಬಂದಿದ್ದರು. ಅವರು ಆರೋಪಿಯ ಮನೆಯ ಬೀಗ ತೆಗೆದರು. ಅಲ್ಲಿ ಮನೆಯ ಹಾಲ್ ನಲ್ಲಿ ಮಂಚದ ಕೆಳಗೆ ಕಡಪ ಕಲ್ಲು ಮೇಲೆ ಎದ್ದಿತ್ತು, ವಾಸನೆ ಬರುತ್ತಿತ್ತು. ಆ ಕಡಪಕಲ್ಲನ್ನು ತೆಗೆದು ನೋಡಿದಾಗ ಅಲ್ಲಿ ಸುಮಾಳ ಶವ ಇತ್ತು. ತಲೆ ಮುಖ ಕೊಳೆತು ಹೋಗಿತ್ತು. ಮೈಕೈ ಎಲ್ಲಾ ಬಾವು ಬಂದಿತ್ತು. ಬಟ್ಟೆಯ ಮೇಲಿಂದ ಅದು ಸುಮಾಳ ಶವ ಎಂದು ಗುರುತಿಸಿದೆವು. ಆರೋಪಿ ಬಲವಾದ ಬಡಗಿಯಿಂದ ಹೊಡೆದು ಕೊಲೆ ಮಾಡಿ ಅಲ್ಲಿ ಹೂತುಹಾಕಿದ್ದಾನೆಂದು ಗೊತ್ತಾಯಿತು. ವರದಕ್ಷಿಣೆ ಕಿರುಕುಳ ಕೊಟ್ಟು ವರದಕ್ಷಿಣೆಗಾಗಿ ಆಕೆಯನ್ನು ಕೊಲೆ ಮಾಡಿ ಹೂತುಹಾಕಿದ್ದ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಸಿ.ಆರ್. ವಕೀಲರಿಂದಃ</u>**

ಈ ಹಂತದಲ್ಲಿ ಆರೋಪಿ ಪರ ವಕೀಲರು ಎಲ್ಲಾ ಪ್ರಮುಖ ಸಾಕ್ಷಿಗಳ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಇಲ್ಲದಿದ್ದರೆ ಆರೋಪಿಯ ರಕ್ಷಣೆಗೆ ತೊಂದರೆಯಾಗುವುದು ಎಂದು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ
ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.